ಆ. ಈ ವಿಷಯದಲ್ಲಿ ದಿನಾಂಕ : 22.01.2002ರಲ್ಲಿ ಸರ್ಕಾರಕ್ಕೆ ಬರೆದ ಮನವಿಯು ಈಗ ಯಾವ ಹಂತದಲ್ಲಿದೆ;

ಇ. ಕುಶಾವತಿ ನದಿ ನೀರಿಗೆ ಅಡ್ಡ ಕಟ್ಟೆ ಕಟ್ಟುವುದರಿಂದ ಹೆಚ್ಚಿನ ಪ್ರವಾಹದ ನೀರು ಮಳಾಗಾಲದಲ್ಲಿ ಅಡ್ಡಕಟ್ಟೆಯಲ್ಲಿ ನಿಲ್ಲುವುದರಿಂದ ಅಲ್ಲಿನ ಪ್ರದೇಶದ ರೈತರಿಗೆ ಅನುಕೂಲವಾಗುವುದಲ್ಲದೆ ಭೂಮಟ್ಟದಲ್ಲಿ ನೀರು ಹೆಚ್ಚಾಗಿ ಶೇಖರಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಮೇಲಿನ ಕಾರ್ಯಗಳ ಬಗ್ಗೆ ಸರ್ಕಾರ ತುರ್ತು ಕ್ರಮ ಏನಾದರೂ ಕೈಗೊಳ್ಳುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ)

ಅ. ಬಂದಿದೆ.

ಆ. ಅನುದಾನದ ಕೊರತೆಯಿಂದ ಮನವಿಯಲ್ಲಿ ಕೋರಿದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಿಲ್ಲ.

ಇ. ಪ್ರಸ್ತುತ ಕುಶಾವತಿ ನದಿಗೆ ಅಡ್ಡಕಟ್ಟೆ ನಿರ್ಮಿಸಿ ನೀರು ನಿಲ್ಲಿಸುವ ಪ್ರಸ್ತಾವನೆ ಯಾವುದೂ ಇರುವುದಿಲ್ಲ.

ಈ. ಕೆಲವು ಸ್ಥಳದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದ್ದು, 2003-04ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿಯಿಂದ ಉದುವಾರಪಲ್ಲಿಗೆ ಬಸ್ ಸೌಕರ್ಯ

129(172) ಶ್ರೀ ಚೌಡಾರೆಡ್ಡಿ (ಚಿಂತಾಮಣಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಾಗೇಪಲ್ಲಿಯಿಂದ ಊದುವಾರ ಪಲ್ಲಿಗೆ ಚಾಕವೆಲ್ ಮೂಲಕ ಡಾಂಬರೀಕರಣ ರಸ್ತೆ ಯಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಊದುವಾರಪಲ್ಲಿಗೆ 10 ಗಂಟೆಗೆ ಬಸ್‌ಸೌಕರ್ಯ ಕಲ್ಪಿಸಿರುವುದು ನಿಜವೇ

ಆ. ಹಾಗಿದ್ದಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುತ್ತಿದ್ದು ಬಸ್‌ಸೌಕರ್ಯವನ್ನು ಸ್ಥಗಿತಗೊಳಿಸಿವುದು ಸರಿಯೇ.

ಇ. ಬಸ್ ಸೌಕರ್ಯವನ್ನು ಪುನರಂಭ ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳತ್ತದೆಯೇ?

ಶ್ರೀ .ಬಿ. ರಮಾನಾಥ್‌ರೈ (ಸಾರಿಗೆ ಸಚಿವರು)

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಕಾರ್ಕಳ ನಗರದ ಒಳಚರಂಡಿ ಯೋಜನೆ

130(198) ಶ್ರೀ ಗೋಪಾಲ ಭಂಡಾರಿ.ಹೆಚ್.(ಕಾರ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಾರ್ಕಳ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಕೆಲವು ವರ್ಷಗಳ ಹಿಂದೆ ಅನುಷ್ಠಾನ ಮಾಡಲಾಗಿದ್ದು, ಅಂದಿನಿಂದ ಈ ವರೆಗೆ ಯೋಜನೆ ಕಾರ್ಯ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಯೋಜನೆಯು ಮ್ಯಾನ್ ಹೋಲ್‌ಗಳು ಕಳಪೆ ಕಾಮಗಾರಿಯಾಗಿದ್ದು ಯೋಜನೆ ಸಂಪೂರ್ಣ ವೈಫಲ್ಯತೆಯಿಂದ ಅನೇಕ ತೆರೆದ ಬಾವಿಗಳ ನೀರು ಕೂಡಾ ಕೆಟ್ಟು ಹೋಗಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಇದಕ್ಕೆ ಪರಿಹಾರವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ. ಒಳಚರಂಡಿಯ ವ್ಯವಸ್ಥೆಯನ್ನು ಪುರಸಭೆಯು ನಿರ್ವಹಿಸುತ್ತಿದೆ.

ಆ. ಕಾರ್ಕಳ ಪಟ್ಟಣಕ್ಕೆ ಒಳಚರಂಡಿ ಯೋಜನೆಯು ನಿರ್ವಹಣೆಯನ್ನು ಪುರಸಭೆಯು ಸಮರ್ಪಕವಾಗಿ ನಿರ್ವಹಿಸದೇ ಇದ್ದ ಕಾರಣ ಈ ಮ್ಯಾನ್ ಹೋಲ್‌ಗಳಲ್ಲಿ ಸೋರಿಕೆ ಉಂಟಾಗಿದೆ. ಕಾರ್ಕಳ ಪಟ್ಟಣದಲ್ಲಿ ಒಟ್ಟು 3000 ಮನೆಗಳಿದ್ದು, ಇದುವರೆವಿಗೆ ಪುರಸಬೆಯವರು 150 ಮನೆಗಳಿಗೆ ಮಾತ್ರ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸಿರುತ್ತಾರೆ, ಇದಲ್ಲದೇ ಕಾರ್ಕಳ ಪಟ್ಟಣದ ವಾಣಿಜ್ಯ ಉದ್ದಿಮೆಗಳು ಹೋಟೆಲ್‌ಗಳು ಹೊರ ಬರುವ ಗ್ರಾಮಸಾರವನ್ನು ಸೆಪ್ಟಿಕ್ ಟ್ಯಾಂಕಿನಲ್ಲಿ ಶೇಖರಿಸುತ್ತಿರುವುದರಿಂದ ಸದರಿ ಪ್ರದೇಶದಲ್ಲಿ ಲ್ಯಾಟರೇಟ್ ಮಣ್ಣು ಇರುವುದರಿಂದ ಬೇಸಿಗೆಯಲ್ಲಿ ಸೀಪೇಜ್ ಆಗಿ, ಸದರಿ ಗ್ರಾಮಸಾರವು. ತೆಗೆದ ಬಾವಿಗಳ ನೀರನ್ನು ಕಲುಷಿತಗೊಳಿಸುತ್ತಿದೆ. ಸದರಿ ತೊಂದರೆಯನ್ನು ನಿವಾರಿಸಲು ಗ್ರಾಮ ಸಾರವನ್ನು ಸೆಪ್ಟಿಕ್ ಟ್ಯಾಂಕಿನಲ್ಲಿ ಶೇಖರಿಸುವ ಬದಲು ನೇರವಾಗಿ ಒಳಚರಂಡಿಯ ಮುಖ್ಯ ಕೊಳವೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸಿದರೆ ತೆರೆದ ಬಾವಿಗಳು ನೀರು ಕಲುಷಿತಗೊಳ್ಳುವುದನ್ನು ತಡೆಯಬಹುದು.

ಕರವಾಳಿ ಜಿಲ್ಲೆಗಳಲ್ಲಿ ನೀರಾವರಿ ಅಭಿವೃದ್ದಿ

131(199) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರಾವಳಿ ಜಿಲ್ಲೆಗಳಲ್ಲಿ ನೀರಾವರಿಗೆ ಮತ್ತು ಅಂತರ್ಜಲ ವೃದ್ದಿಪಡಿಸಲು ಯೋಜಿಸಿರುವ ಪಶ್ಚಿಮಹಾವಾಹಿನಿ ಯೋಜನೆ ಈಗ ಯಾವ ಹಂತದಲ್ಲಿದೆ.

ಆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ವ್ಯವಸ್ಥೆಯನ್ನು ಬಲ ಪಡಿಸಲು ಯೋಜನೆಗಳನ್ನು ರೂಪಿಸಲು ಸರ್ಕಾರ ಕೈಕೊಂತ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ)

ಅ. ಅಂದಾಜುನ್ನು ಕೇಂದ್ರ ಸರ್ಕಾರದ ಅನುಮೋದನೆ ಹಾಗೂ ಸಹಾಯಧನ ಕೋರಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಮುನ್ನ ಯೋಜನಾ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ. ಆ ಇಲಾಖೆಯಿಂದ ಅಭಿಪ್ರಾಯ ಬಂದ ನಂತರ ಕೊಡಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ಆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೀರಾವರಿ ವ್ಯವಸ್ತೆಯನ್ನು ಬಲಪಡಿಸಲು ಪಶ್ಚಿಮ ವಾಹಿನಿ ಯೋಜನೆಯಲ್ಲದೆ ಹೊಸ ಕಿಂಡಿ ಅಣೆಕಟ್ಟುಗಳ ನಿರ್ಮಾಣ. ಕರೆಗಳ ಮತ್ತು ಕಿಂಡಿ ಅಣೆಕಟ್ಟುಗಳ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ. ರೈತ ಕಾಯಕ ಕೆರೆ ಯೋಜನೆಯಡಿ ಪ್ರತಿ ಹೋಬಳಿಗೆ ಒಂದರಂತೆ ಕೆರೆ ಗಳನ್ನು ಸಮಗ್ರವಾಗಿ ಅಭಿವೃದ್ದಿಪಡಿಸಲು ಯೋಜಿಸಲಾಗಿದೆ. ಈ ಯೋಜನೆಯು ಪ್ರಥಮ ಹಂತದಲ್ಲಿ ಪ್ರತಿ ಮತಕ್ಷೇತ್ರಕ್ಕೊಂದು ಕೆರೆಯ